# ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ಅಧಿನಿಯಮ, 2000

## ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು :**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಅಜಲು ಪದ್ಧತಿಯ ನಿಷೇಧ.
4. ದಂಡನೆ.
5. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ರಕ್ಷಣೆ.
6. ನಿಯಮಗಳ ರಚನಾಧಿಕಾರ.
7. ನಿರಸನ ಮತ್ತು ಉಳಿಸುವಿಕೆಗಳು.

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2000ದ ಅಧಿನಿಯಮ ಸಂಖ್ಯೆ 30.-** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆದಿವಾಸಿ ಬುಡಕಟ್ಟುಗಳಿಗೆ ಸೇರಿದ ಕೊರಗರು ಅನಕ್ಷರಸ್ಥರು ಹಾಗೂ ಮೂಢ ನಂಬಿಕೆಯುಳ್ಳವರಾಗಿದ್ದಾರೆ. ಅಜಲು ಪದ್ಧತಿಗಾಗಿ ಕೊರಗರ ಸೇವೆಯನ್ನು ಬಳಸಿಕೊಳ್ಳುವ ರೂಢಿಯು ಈಗಲೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇದೆ.

ಅಜಲು ಪದ್ಧತಿಯು, ಕೊರಗರು ಮತ್ತು ಇತರ ಸಮುದಾಯಗಳಿಗೆ ಸೇರಿದ ವ್ಯಕ್ತಿಗಳ ನಡುವೆ ತಾರತಮ್ಯ ಮಾಡುವುದನ್ನು, ಅವರನ್ನು ಕೀಳು ಮನುಷ್ಯರಂತೆ ಪರಿಗಣಿಸುವುದನ್ನು, ಆಹಾರದಲ್ಲಿ ಕೂದಲು, ಉಗುರುಗಳು ಅಥವಾ ಯಾವುದೇ ಇತರ ತಿನ್ನಲಾಗದ ಅಥವಾ ಹಾನಿಕಾರಕ ಪದಾರ್ಥಗಳನ್ನು ಬೆರೆಸಿ ಅಂಥ ಆಹಾರವನ್ನು ತಿನ್ನುವಂತೆ ಅವರನ್ನು ಕೇಳುವುದನ್ನು ಮತ್ತು ಅವರು ಕಂಬಳದ ಪ್ರಾರಂಭದ ಮೊದಲು ಕೋಣಗಳಂತೆ ಓಡುವಂತೆ ಮಾಡುವುದನ್ನು ಒಳಗೊಳ್ಳುತ್ತದೆ. ಈ ಪದ್ಧತಿಗಳಿಂದಾಗಿ, ಕೊರಗರನ್ನು ಶೋಷಣೆ ಮಾಡಿದಂತೆ ಮತ್ತು ಅವರನ್ನು ಗುಲಾಮರಾಗಿ ನಡೆಸಿಕೊಂಡಂತೆ ಆಗಿ ಮಾನವ ಘನತೆಗೆ ಭಂಗ ತರುತ್ತದೆ. ಕೊರಗರು ಅಜಲು ಪದ್ಧತಿಯನ್ನು ತಾವಾಗಿಯೇ ನಿರಾಕರಿಸುವುದರಿಂದ ಅವರ ಜೀವನವು ತೀರಾ ತೊಂದರೆಗೆ ಈಡಾಗುತ್ತದೆ. ಆದ್ದರಿಂದ ಅಜಲು ಪದ್ಧತಿಯನ್ನು ನಿಷೇದಿಸುವುದಕ್ಕಾಗಿ ಒಂದು ಸೂಕ್ತ ಶಾಸನವನ್ನು ತರುವುದು ಮತ್ತು ಅದನ್ನು ಕಾನೂನಿನ ಅಡಿಯಲ್ಲಿ ದಂಡನೀಯವನ್ನಾಗಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000 ದ ವಿಧಾನ ಸಭಾ ವಿಧೇಯಕ ಸಂಖ್ಯೆ 18ರಲ್ಲಿದಂತೆ.)

* * * *

**2000ರ ಕರ್ನಾಟಕ ಅಧಿನಿಯಮ ಸಂಖ್ಯೆ 30**

*(2000ರ ಡಿಸೆಂಬರ್ 13ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ಅಧಿನಿಯಮ, 2000

*(2000ರ ಡಿಸೆಂಬರ್ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

**ಕರ್ನಾಟಕ ರಾಜ್ಯದ ಕೆಲವು ಭಾಗಗಳಲ್ಲಿ ಅಜಲು ಪದ್ಧತಿಗಾಗಿ ಕೊರಗರ ಸೇವೆಗಳನ್ನು ಬಳಸುವುದನ್ನು ಪ್ರತಿಬಂಧಿಸಲು ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.**

ಕರ್ನಾಟಕ ರಾಜ್ಯದ ಕೆಲವು ಭಾಗಗಳಲ್ಲಿ, ವಿಶೇಷವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಜಲು ಪದ್ಧತಿಗಾಗಿ ಕೊರಗರ ಸೇವೆಗಳನ್ನು ಬಳಸುವುದು ಜಾರಿಯಲ್ಲಿರುವುದರಿಂದ;

ಮತ್ತು ಅಂಥ ಪದ್ಧತಿಯು ಕೊರಗರ ಶೋಷಣೆ ಮಾಡಿದಂತೆ ಮತ್ತು ಅವರನ್ನು ಗುಲಾಮರನ್ನಾಗಿ ನಡೆಸಿಕೊಂಡಂತೆ ಆಗುವುದರಿಂದ ಹಾಗೂ ಅದು ಮಾನವ ಘನತೆಗೆ ಭಂಗ ತರುವುದರಿಂದ;

ಮತ್ತು ಅಂಥ ಪದ್ಧತಿಯನ್ನು ಕೊನೆಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ: -

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.** – (1) ಈ ಅಧಿನಿಯಮವನ್ನು ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು ಸಮಗ್ರ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(3) ಇದು 2000ದ ಆಗಸ್ಟ್ ಹದಿನೇಳನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, -

(ಎ) 'ಅಜಲು ಪದ್ಧತಿ' ಎಂದರೆ, -

(i) ಕೊರಗರಿಂದ ಪಡೆದ ಸೇವೆಗಾಗಿ ಅವರಿಗೆ ಮಜೂರಿ ನೀಡದೆ ಅಥವಾ ಕಡಿಮೆ ಮಜೂರಿ ನೀಡುವ ಮೂಲಕ ಕೊರಗರ ಹಾಗೂ ಇತರ ಸಮುದಾಯಗಳಿಗೆ ಸೇರಿದ ವ್ಯಕ್ತಿಗಳ ನಡುವೆ ತಾರತಮ್ಯ ಮಾಡುವ;

(ii) ಇತರರಿಗೆ ಹೋಲಿಸಲಾಗಿ ಕೊರಗರನ್ನು ಕೀಳು ಮನುಷ್ಯರೆಂದು ಪರಿಗಣಿಸುವ;

(iii) ಆಹಾರದಲ್ಲಿ ಕೂದಲು, ಉಗುರುಗಳು ಅಥವಾ ಇತರ ಯಾವುದೇ ತಿನ್ನಲಾಗದ ಅಥವಾ ಹಾನಿಕರ ಪದಾರ್ಥಗಳನ್ನು ಬೆರೆಸುವ ಮತ್ತು ಆ ಆಹಾರವನ್ನು ತಿನ್ನುವಂತೆ ಕೊರಗರನ್ನು ಕೇಳುವ;

(iv) ಕಂಬಳಕ್ಕೆ ಮೊದಲು ಕೊರಗರನ್ನು ಕೋಣಗಳಂತೆ ಓಡಿಸುವ,

- ಯಾವುದೇ ಕಾರ್ಯ ಅಥವಾ ಸಮಾರಂಭದ ಆಚರಣೆ;

(ಬಿ) 'ಕಂಬಳ' ಎಂದರೆ, ಕೆಸರಿನಲ್ಲಿ ಕೋಣಗಳನ್ನು ಓಡಿಸುವುದು;

(ಸಿ) 'ಕೊರಗ' ಎಂದರೆ, ಕೊರಗ ಸಮುದಾಯಕ್ಕೆ ಸೇರಿದ ಯಾವುದೇ ವಯಸ್ಸಿನ ಆದಿವಾಸಿ ಬುಡಕಟ್ಟಿನ ಒಬ್ಬ ವ್ಯಕ್ತಿ.

**3. ಅಜಲು ಪದ್ಧತಿಯ ನಿಷೇಧ.–** ಯಾವುದೇ ಕಾನೂನು ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ರೂಢಿ, ಆಚರಣೆ ಅಥವಾ ಪದ್ಧತಿಯಲ್ಲಿ ಏನೇ ಒಳಗೊಂಡಿದ್ದಾಗ್ಯೂ ಯಾವೊಬ್ಬ ವ್ಯಕ್ತಿಯು, ಕೊರಗರ ಒಪ್ಪಿಗೆ ಪಡೆದು ಅಥವಾ ಒಪ್ಪಿಗೆ ಇಲ್ಲದೆ ಅಜಲು ಪದ್ಧತಿಗಾಗಿ ಅವರ ಸೇವೆಗಳನ್ನು ಬಳಸಿಕೊಳ್ಳತಕ್ಕದ್ದಲ್ಲ.

**4. ದಂಡನೆ. –** ಈ ಅಧಿನಿಯಮದ ಪ್ರಾರಂಭದ ತರುವಾಯ ಯಾವೊಬ್ಬ ವ್ಯಕ್ತಿಯು, ಅಜಲು ಪದ್ಧತಿಗಾಗಿ ಕೊರಗರ ಸೇವೆಗಳನ್ನು ಬಳಸಿಕೊಂಡರೆ ಅಥವಾ ಬಳಸಿಕೊಳ್ಳಲು ಪ್ರೇರೇಪಿಸಿದರೆ, ಅವನು ದೋಷ ಸಿದ್ಧಿಯಾದ ತರುವಾಯ, ಆರು ತಿಂಗಳಿಗಿಂತ ಕಡಿಮೆಯಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಒಂದು ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**5. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಸರ್ಕಾರದ ಅಥವಾ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**6. ನಿಯಮಗಳ ರಚನಾಧಿಕಾರ. –** (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ನಂತರ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗುವ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ನಿಕಟೋತ್ತರ ಅಧಿವೇಶನ ಅಥವಾ ನಿರಂತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ಅಂಥ ಯಾವುದೇ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ಮಾಡಕೂಡದೆಂದು ಅಥವಾ ಹೊರಡಿಸಕೂಡದೆಂದು ಉಭಯ ಸದನಗಳು ಒಪ್ಪಿದರೆ, ಆ ನಿಯಮಗಳು ತದನಂತರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**7. ನಿರಸನ ಮತ್ತು ಉಳಿಸುವಿಕೆಗಳು.–** (1) ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ಆಧ್ಯಾದೇಶ, 2000ವನ್ನು (2000ದ ಕರ್ನಾಟಕ ಆಧ್ಯಾದೇಶ ಸಂಖ್ಯೆ 7) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದಾಗ್ಯೂ ಸದರಿ ಆಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

* * * *